ಅಲ್ಯೋಷ ಮನೆಯ ಕಿರಿಯ ಮಗ. ಅವನನ್ನು ಎಲ್ಲರೂ 'ಗಡಿಗೆ' ಅನ್ನುವ ಅಡ್ಡಹೆಸರಿನಿಂದ ಕರೆಯುತ್ತಿದ್ದರು. ಅದಕ್ಕೆ ಕಾರಣ ಅಂದರೆ, ಒಂದು ಸಲ ಅವನ ತಾಯಿ ಒಂದು ಗಡಿಗೆ ಹಾಲನ್ನು ಧರ್ಮಾಧಿಕಾರಿಯ ಹೆಂಡತಿಗೆ ಕೊಡು ಅಂತ ಕಳಿಸಿಕೊಟ್ಟಿದ್ದಳು. ಆದರೆ ಇವನು ದಾರಿಯಲ್ಲಿ ಎಡವಿ ಬಿದ್ದು ಗಡಿಗೆ ಒಡೆದಿತ್ತು, ಹಾಲು ನೆಲದ ಪಾಲಾಗಿತ್ತು. ಅವರ ಅಮ್ಮ ಅವನಿಗೆ ಚೆನ್ನಾಗಿ ಒದೆ ಕೊಟ್ಟಿದ್ದಳು; ಆಗಿನಿಂದ ಹಳ್ಳಿಯ ಹುಡುಗರೆಲ್ಲ ಅವನನ್ನು 'ಗಡಿಗೆ' ಅಂತ ಅಡ್ಡಹೆಸರಿನಿಂದ ಚುಡಾಯಿಸುತ್ತಿದ್ದರು. 'ಗಡಿಗೆ ಅಲ್ಯೋಷ' ಅನ್ನೋ ಹೆಸರು ಅವನಿಗೆ ಅಂಟಿಕೊಂಡಿದ್ದು ಹೀಗೆ.

ಅಲ್ಯೋಷನದು ಪುಟ್ಟ ಹುಟ್ಟು, ಜೊತೆಗೆ ಸಣ್ಣಗೆ ಬೇರೆ ಇದ್ದ. ಅವನ ಕಿವಿಯ ಹಾಲೆಗಳು ನೀಳವಾಗಿದ್ದು ಓಡಾಡುವಾಗ ಆ ಕಡೆ ಈ ಕಡೆ ರೆಕ್ಕೆಗಳ ಥರ ಹಾರಾಡುತ್ತಿದ್ದವು; ಜೊತೆಗೆ, ಅವನದು ದೊಡ್ಡ ಮೂಗು ಬೇರೆ. ಊರ ಹುಡುಗರೆಲ್ಲ ಇದರಿಂದಾಗಿ ಅವನನ್ನು ನೋಡಿ, 'ಅಲ್ಯೋಷ ಮೂಗು ಸೋರೆಕಾಯಿ!' ಅಂತ ಗೇಲಿ ಮಾಡುತ್ತಿದ್ದರು.

ಅಲ್ಯೋಷನ ಊರಲ್ಲಿ ಒಂದು ಶಾಲೆ ಇತ್ತು; ಆದರೆ ಓದೋದು ಬರೆಯೋದು ಅವನ ಹತ್ತಿರ ಸುಳಿದಾಡಲಿಲ್ಲ; ಜೊತೆಗೆ ಅವನಿಗೆ ಶಾಲೆಗೆ ಹೋಗಕ್ಕೆ ಸಮಯ ಎಲ್ಲಿತ್ತು? ಅವರ ಅಣ್ಣ ಹತ್ತಿರದ ಪಟ್ಟಣದಲ್ಲಿ ಒಬ್ಬ ವ್ಯಾಪಾರಿಯ ಮನೇಲಿದ್ದುಕೊಂಡು ಕೆಲಸಕ್ಕಿದ್ದರೆ, ಇಲ್ಲಿ ಅಲ್ಯೋಷ ಚಿಕ್ಕಂದಿನಿಂದಲೇ ತಂದೆಗೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ. ಅವನಿಗೆ ಆರು ವರ್ಷವಾಗಿದ್ದಾಗಿನಿಂದಲೇ ತಂಗಿ ಜೊತೆ ಸೇರಿ ಮನೆಯ ಹಸು ಮತ್ತು ಕುರಿಗಳನ್ನು ಮೇಯಿಸುವ ಕೆಲಸ ನೋಡಿಕೊಳ್ಳುತ್ತಿದ್ದ. ಮುಂದೆ, ಇನ್ನೂ ದೊಡ್ಡವನಾಗೋದಕ್ಕೆ ಮುಂಚಿನಿಂದಲೇ ಹಗಲು ರಾತ್ರಿ ಮನೆಯ ಕುದುರೆಗಳ ಪರಿಚಾರಿಕೆ ಮಾಡಬೇಕಾಗಿತ್ತು. ಹನ್ನೆರಡು ವರ್ಷವಾಗಿದ್ದಾಗಿನಿಂದ ಅವನು ಗಾಡಿ ಹೊಡೆಯೋದು, ಹೊಲ ಉಳೋದು — ಇವುಗಳನ್ನೂ ಮಾಡತೊಡಗಿದ್ದ. ಈ ಕೆಲಸಗಳನ್ನು ಮಾಡೋದಕ್ಕೆ ಅವನಿಗೆ ಸಾಕಷ್ಟು ಶಕ್ತಿ ಇರಲಿಲ್ಲ, ಆದರೂ ಅವನು ಸದಾ ಹಸನ್ಮುಖಿಯಾಗಿರುತ್ತಿದ್ದ. ಪ್ರಸನ್ನತೆ ಅವನ ಹುಟ್ಟುಗುಣ. ಗೆಳೆಯರು ತನ್ನ ನೋಡಿ ಗೇಲಿ ಮಾಡಿ ನಕ್ಕರೆ ಸುಮ್ಮನಿರುತ್ತಿದ್ದ, ಇಲ್ಲ ತಾನೂ ಅವರ ಜೊತೆ ನಗುತ್ತಿದ್ದ. ಅವರಪ್ಪ ಸಿಟ್ಟಿನಿಂದ ಬಯ್ಯುತ್ತ ಇದ್ದರೆ ಕೇಳಿಸಿಕೊಂಡು ಸುಮ್ಮನೆ ನಿಂತಿರುತ್ತಿದ್ದ. ಆಡುವುದು ಮಾಡಿ ಸುಮ್ಮನಾದ ಮೇಲೆ ಅವನು ನಸುನಗುತ್ತ ತಾನೇನು ಕೆಲಸ ಮಾಡುತ್ತಿದ್ದನೋ ಅದರ ಕಡೆ ಗಮನ ಕೊಡುತ್ತಿದ್ದ.

ಅಲ್ಯೋಷನಿಗೆ ಹತ್ತೊಂಬತ್ತು ವರ್ಷವಾಗಿದ್ದಾಗ, ಅವರ ಅಣ್ಣ ಸೈನ್ಯ ಸೇರಿದ. ಆಗ ಅವರಪ್ಪ ಅವನಿದ್ದ ಜಾಗದಲ್ಲಿ ಅಲ್ಯೋಷನನ್ನು ಪಟ್ಟಣದ ವ್ಯಾಪಾರಿಯ ಹತ್ತಿರ ಜೀತಕ್ಕೆ ಸೇರಿಸಿದ. ಅಣ್ಣನ ಹಳೆಯ ಬೂಟುಗಳನ್ನು ಹಾಕಿಕೊಂಡು ಅಪ್ಪನ ಟೋಪಿ–ಕೋಟುಗಳನ್ನು ಧರಿಸಿ ಅಪ್ಪನ ಜೊತೆ ಪಟ್ಟಣಕ್ಕೆ ಹೋದ. ತನ್ನ ಹೊಸ ದಿರಿಸು ಅಲ್ಯೋಷನಿಗೆ ಖುಷಿ ತಂದುವು, ಆದರೆ ವ್ಯಾಪಾರಿ ಅವನ ಪೀಚು ದೇಹ ನೋಡಿ ತಲೆ ಅಲ್ಲಾಡಿಸಿ, 'ಸೈಮೊನ್ ಥರದ ಒಬ್ಬ ಯುವಕನನ್ನು ಕರಕೊಂಡು ಬರ್‍ತೀಯ ಅಂತಿದ್ದೆ, ನೀನು ನೋಡಿದ್ರೆ ಈ ಅಳುಬುರುಕನನ್ನು ಕರ್ಕೊಂಡು ಬಂದಿದ್ದೀಯ; ಇವನು ಯಾವ ಕೆಲಸಕ್ಕೆ ಬಂದಾನು' ಅಂತ ಗೊಣಗಿದ್ದ.

'ಇಲ್ಲ ಧಣಿ, ಇವನು ಯಾವ ಕೆಲಸ ಬೇಕಾದ್ರೂ ಮಾಡ್ತಾನೆ... ಕುದುರೆ ಸಿದ್ಧ ಮಾಡಿ ಎಲ್ಲಿಗೆ ಬೇಕಾದರೂ ಕರಕೊಂಡು ಹೋಗ್ತಾನೆ. ಇವನೊಬ್ಬ ಕೆಲಸಬುರುಕ, ನೋಡಕ್ಕೆ ಕಡ್ಡಿ, ಅಷ್ಟೆ. ಆದರೆ ನಾರಿನ ಹುರಿ ಥರ ಗಟ್ಟಿ.'

'ನೋಡಾಣ, ಹೇಗಿರ್ತಾನೋ.'

'ಎಲ್ಲಕ್ಕಿಂತ ಹೆಚ್ಚಾಗಿ ಇವನು ತುಂಬ ವಿನಯವಂತ, ಕೆಲಸ ಮಾಡೋದು ಅಂದ್ರೆ ಅವನಿಗಿಷ್ಟ.'

'ಇನ್ನೇನು ಮಾಡೋದು; ಬಿಟ್ಟು ಹೋಗು ಅವನ್ನ.'

ಹೀಗೆ ಅಲ್ಯೋಷ ವ್ಯಾಪಾರಿ ಮನೆಯಲ್ಲಿ ಜೀತಕ್ಕೆ ಸೇರಿಕೊಂಡ.

ವ್ಯಾಪಾರಿ ಕುಟುಂಬವೇನೂ ದೊಡ್ಡದಾಗಿರಲಿಲ್ಲ: ಮನೆಯಲ್ಲಿದ್ದುದು ವ್ಯಾಪಾರಿ, ಅವನ ಹೆಂಡತಿ, ಅವನ ಮುದುಕಿ ತಾಯಿ, ಮತ್ತು ಮೂವರು ಮಕ್ಕಳು. ಬರಿ ಗ್ರಾಮರ್ ಸ್ಕೂಲನ್ನಷ್ಟೇ ಪೂರೈಸಿದ್ದ ಅವನ ಹಿರಿಯ ಮಗ ಮದುವೆಯಾಗಿ ತಂದೆಯ ಜೊತೆಯೇ ವ್ಯಾಪಾರದಲ್ಲಿ ತೊಡಗಿದ್ದ. ಇನ್ನೊಬ್ಬ ಮಗ ಬುದ್ಧಿವಂತ, ಹೈಸ್ಕೂಲು ಮುಗಿಸಿ, ಸ್ವಲ್ಪ ಕಾಲ ವಿಶ್ವವಿದ್ಯಾನಿಲಯದಲ್ಲಿದ್ದ; ಅಲ್ಲಿಂದ ವಜಾಗೊಂಡು ಈಗ ತಂದೆಯ ಜೊತೆಯೇ ಇದ್ದ. ಕೊನೆಯವಳು ಮಗಳು, ಹೈಸ್ಕೂಲಿನಲ್ಲಿ ಓದುತ್ತಿದ್ದಳು.

ಮೊದಮೊದಲು ಅವರಾರಿಗೂ ಅಲ್ಯೋಷ ಇಷ್ಟವಾಗಿರಲಿಲ್ಲ. ಅವನು ತೀರ ಹಳ್ಳಿಗಾಡಿನವನಂತಿದ್ದು, ಕಳಪೆ ಉಡುಪು ಧರಿಸುತ್ತಿದ್ದ. ಅವನಿಗೆ ಶಿಷ್ಟಾಚಾರವೇ ತಿಳಿಯದು; ತನ್ನ ಹಳ್ಳಿಯಲ್ಲಿದ್ದಂತೆಯೇ ಎಲ್ಲರನ್ನೂ ಸಲುಗೆಯಿಂದಲೇ ಮಾತಾಡಿಸುತ್ತಿದ್ದ. ಆದರೆ ಕೊಂಚ ಕಾಲದಲ್ಲಿಯೇ ಅವನ ನಡವಳಿಕೆಗೆ ಎಲ್ಲರೂ ಹೊಂದಿಕೊಂಡರು. ಅವನು ತನ್ನಣ್ಣನಿಗಿಂತ ಒಳ್ಳೆಯ ಸೇವಕ; ಹೇಳಿದ ಕೆಲಸಕ್ಕೆ ಸದಾ ಸಿದ್ಧವಾಗಿರುತ್ತಿದ್ದ. ಮನೆಯವರು ಯಾರೇ ಏನು ಹೇಳಿದರೂ ತಕ್ಷಣವೇ ಸಮಾಧಾನದಿಂದ ಮಾಡಿ ಮುಗಿಸುತ್ತಿದ್ದ. ಒಂದಾದ ಮೇಲೊಂದರಂತೆ ಬಿಡುವಿಲ್ಲದೆ ಕೆಲಸದಲ್ಲಿ ತೊಡಗಿಕೊಳ್ಳುತ್ತಿದ್ದ. ಅಂಗಡಿಯಲ್ಲಿಯೂ ಮನೆಯಲ್ಲಿನಂತೆಯೇ ಎಲ್ಲ ಕೆಲಸಗಳನ್ನೂ ಅಲ್ಯೋಷನಿಗೇ ಒಪ್ಪಿಸುತ್ತಿದ್ದರು. ಹೇಳಿದ ಕೆಲಸ ಮಾಡಿ ಮುಗಿಸುವಷ್ಟರಲ್ಲಿ ಇನ್ನೊಂದು ಕೆಲಸ ಹೇಳಿರುತ್ತಿದ್ದರು. ಮನೆಯ ಯಜಮಾನಿತಿ ಹಾಗೂ ಅವಳ ಅತ್ತೆ ಮತ್ತು ಮಗಳು, ಕಿರಿಯ ಮಗ, ಅಷ್ಟೇಕೆ ವ್ಯಾಪಾರಿಯ ಕಾರಕೂನ, ಅಡುಗೆಯವಳು ಕೂಡ — ಅವನನ್ನು ಅಲ್ಲಿ ಇಲ್ಲಿಗೆ ಕಳಿಸುತ್ತಿದ್ದರು, ತಲೆಗೆ ಬಂದ ಕೆಲಸವನ್ನೆಲ್ಲ ಅವನಿಗೆ ಹೇಳುತ್ತಿದ್ದರು. ಅಲ್ಯೋಷನಿಗೆ ಕೇಳಿಸುತ್ತಿದ್ದುದೆಂದರೆ, 'ಅಲ್ಯೋಷ ಇಲ್ಲಿಗೆ ಹೋಗು, ಅಲ್ಲಿಗೆ ಹೋಗು' ಅನ್ನುವ, 'ಅಲ್ಯೋಷ, ಇದನ್ನ ಸ್ವಲ್ಪ ಬಗೆಹರಿಸು' ಅನ್ನುವ, 'ಅಲ್ಯೋಷ, ಮರೆತುಬಿಟ್ಯಾ? ನೋಡು ಈ ಕೆಲಸ ಮರೆಯೋ ಹಂಗಿಲ್ಲ' ಅನ್ನುವ ಮಾತುಗಳೇ. ಅಲ್ಯೋಷ, ಹೇಳಿದ ಕಡೆ ಹೋಗುತ್ತಿದ್ದ, ಸಮಸ್ಯೆ ಬಗೆಹರಿಸುತ್ತಿದ್ದ, ಯಾವುದನ್ನೂ ಮರೆತಿರಲಿಲ್ಲ, ಎಲ್ಲವನ್ನೂ ಮುಗುಳುನಗುತ್ತಲೇ ಮಾಡಿ ಮುಗಿಸುತ್ತಿದ್ದ.

ಅಲ್ಯೋಷ ಧರಿಸುತ್ತಿದ್ದ ಬೂಟುಗಳು ಬಹು ಬೇಗ ಸವೆದುಹೋದುವು. ಕಿತ್ತುಹೋದ ಬೂಟುಗಳಲ್ಲೇ ಓಡಾಡುತ್ತ ಇದ್ದ ಅವನನ್ನು ನೋಡಿ ಯಜಮಾನ ಚೆನ್ನಾಗಿ ಬೈದು, ಹೊಸದೊಂದು ಜೊತೆ ಬೂಟುಗಳನ್ನು ಕೊಂಡುಕೊಳ್ಳುವಂತೆ ಹೇಳಿದ. ಈ ಬೂಟುಗಳು ಅಸಲಿಯಾಗಿ ಹೊಸವು, ಅವನ್ನು ಧರಿಸಿದ ಅಲ್ಯೋಷನಿಗೆ ತುಂಬ ಸಂತೋಷವಾಯಿತು. ಆದರೆ ಅವನ ಪಾದಗಳು ಮಾತ್ರ ಹಳೆಯವೇ ಆದ್ದರಿಂದ ಓಡಾಡಿ ಓಡಾಡಿ ಸಂಜೆ ಹೊತ್ತಿಗೆ ನೋಯತೊಡಗಿದವು. ಜೊತೆಗೆ, ತಂದೆ ಯಜಮಾನರಿಂದ ಸಂಬಳ ವಸೂಲಿಗೆಂದು ಬಂದವನು ಅದರಲ್ಲಿ ಬೂಟುಗಳ ಬೆಲೆಯನ್ನು ಉತ್ತಾರ ಹಾಕಿಕೊಂಡಿರೋದನ್ನು ನೋಡಿ ಕಸಿವಿಸಿಗೊಳ್ಳಬಹುದೆಂಬ ಆತಂಕ ಬೇರೆ ಉಂಟಾಯಿತು.

ಚಳಿಗಾಲದಲ್ಲಿ ಅಲ್ಯೋಷ ಹೊತ್ತು ಹುಟ್ಟುವ ಮುಂಚೆಯೇ ಏಳುತ್ತಿದ್ದ: ಸೌದೆ ಸೀಳಿ, ಅಂಗಳವನ್ನೆಲ್ಲ ಸಾರಿಸಿ, ದನ ಮತ್ತು ಕುದುರೆಗಳಿಗೆ ಮೇವು–ನೀರು ಹಾಕುತ್ತಿದ್ದ. ಆಮೇಲೆ, ಒಲೆಗಳನ್ನು ಹೊತ್ತಿಸಿ, ಮನೆಯಲ್ಲಿದ್ದವರದೆಲ್ಲ ಕೋಟು–ಬೂಟುಗಳನ್ನು ಒರೆಸಿ, ಚಹಾ ಪಾತ್ರೆಗಳನ್ನು ಹೊರತೆಗೆದು ಮೆರುಗು ಕೊಡುತ್ತಿದ್ದ. ಅಷ್ಟು ಹೊತ್ತಿಗೆ ಕಾರಕೂನ ಅಂಗಡಿಯಲ್ಲಿ ಸಾಮಾನು ತೆಗೆದುಕೊಡಲು ಕೂಗುತ್ತಿದ್ದ, ಅಥವಾ ಅಡುಗೆಯವಳು ಕಣಕ ನಾದುವುದಕ್ಕೆಂದೋ ಪಾತ್ರೆಗಳನ್ನು ತೊಳೆಯಲೆಂದೋ ಕರೆಯುತ್ತಿದ್ದಳು. ಕೊಂಚ ಕಾಲದ ಮೇಲೆ, ಏನೋ ವಿಷಯ ತಿಳಿಸಿ ಅವನನ್ನು ಊರಲ್ಲಿನ ಯಾವುದೋ ಸ್ಥಳಕ್ಕೋ ಮಗಳನ್ನು ಕರೆತರಲು ಶಾಲೆಗೋ ಕಳಿಸುತ್ತಿದ್ದರು. ಅಥವಾ ಯಜಮಾನರ ಮುದಿ ತಾಯಿಗೆ ದೀಪದ ಎಣ್ಣೆ ತರುವುದಕ್ಕೋ ಇನ್ನು ಯಾತಕ್ಕೋ ಹೋಗಬೇಕಾದ ಕೆಲಸ ಕಾದಿರುತ್ತಿತ್ತು. 'ಎಲ್ಲಿ ಅಲೀತಾ ಇದ್ಯೋ, ಕೆಲಸಕ್ಕೆ ಬಾರದೋನೇ?' ಅಂತ ಬೈಯಲು ಒಬ್ಬರಲ್ಲ ಒಬ್ಬರು ಕಾದಿರುತ್ತಿದ್ದರು. ಇಲ್ಲದಿದ್ದರೆ, 'ನೀನೇ ಯಾಕೆ ಹೋಗ್ತೀ? ಅಲ್ಯೋಷ ಇದಾನಲ್ಲ, ಅವನನ್ನ ಕಳಿಸು', ಅಂತಲೋ ತಮ್ಮತಮ್ಮೊಳಗೆ ಮಾತಾಡಿಕೊಂಡು ಅವನನ್ನು ಅಟ್ಟುತ್ತಿದ್ದರು.

ಅಲ್ಯೋಷ ಬೆಳಗ್ಗೆ ತಿಂಡಿ ತಿನ್ನುತ್ತಿದ್ದುದು ಈ